ಮಕ್ಕಳನ್ನು ಬೆಳೆಸೋದು ಹೇಗೆ? ಇಂಥದೊಂದು ಪ್ರಶ್ನೆಯನ್ನು ಎಲ್ಲ ತಲೆಮಾರುಗಳಲ್ಲೂ ಪೋಷಕರು ಎದುರಿಸಿಯೇ ಇರುತ್ತಾರೆ. ಆದರೆ, ಇಂದಿನ ಪೋಷಕರಿಗೆ ಈ ಪ್ರಶ್ನೆಯೀಗ ಕೊಂಚ ಬೇರೆಯಾಗಿ ಎದುರಾಗಿದೆ. ಅದೆಂದರೆ: ಗಂಡುಮಕ್ಕಳನ್ನು ಬೆಳೆಸೋದು ಹೇಗೆ?

ಹುಡುಗರನ್ನು ಬೆಳೆಸುವುದಕ್ಕೆ ಒಂದು ಬಗೆ, ಹುಡುಗಿಯರನ್ನು ಬೆಳೆಸುವುದಕ್ಕೆ ಇನ್ನೊಂದು ಬಗೆ ಎನ್ನುವ ವಿಧಾನವಿದೆಯೆ? ಆ ಕುರಿತು ಯೋಚಿಸಲು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿರುವ ಅತ್ಯಾಚಾರ ಪ್ರಕರಣಗಳು ಕಾರಣವಾಗಿವೆ.


ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಯುವತಿಯೊಬ್ಬಳ ಮೇಲೆ ಇತ್ತೀಚೆಗೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ, ಮಕ್ಕಳನ್ನು ಬೆಳೆಸುವುದರ ಕುರಿತ ಚರ್ಚೆಗೆ ಕಾರಣವಾಗಿದೆ. ಅತ್ಯಾಚಾರ ಪ್ರಕರಣಗಳು ನಡೆದಾಗಲೆಲ್ಲ ಎರಡು ಬಗೆಯ ಮಾತುಗಳ ಉಬ್ಬರವನ್ನು ಕಾಣುತ್ತೇವೆ. ಒಂದು, ಹೆಣ್ಣುಮಕ್ಕಳು ತಮ್ಮ ಸುರಕ್ಷತೆಯ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎನ್ನುವಂತಹ ಮಾತುಗಳು. ಇನ್ನೊಂದು, ಹೆಣ್ಣನ್ನು ತನಗೆ ಸಮಾನವಾಗಿ ಗುರ್ತಿಸಲು ಅಗತ್ಯವಾದ ನೈತಿಕ ಶಿಕ್ಷಣವನ್ನು ಗಂಡುಮಕ್ಕಳಿಗೆ ನೀಡುವ ಅಗತ್ಯ. ಮೈಸೂರಿನ ಪ್ರಕರಣದ ನಂತರವೂ ಮತ್ತೆ ಅದೇ ಅದೇ ಮಾತು, ಚರ್ಚೆಗಳು. ಅತ್ಯಾಧುನಿಕವಾದ ತಂತ್ರಜ್ಞಾನದ ಯುಗಕ್ಕೆ ನಾವು ಕಾಲಿಟ್ಟರೂ ಇಲ್ಲಿ ಹೆಣ್ಣಿಗೆ ಮುಕ್ತವಾಗಿ ಓಡಾಡುವ ಭದ್ರತೆಯಿಲ್ಲ ಎನ್ನುವ ಆತಂಕ, ಅಳಲು. ಅನಾಹುತಗಳಿಗೆ ಆಕೆಯ ವರ್ತನೆಗಳೇ ಕಾರಣವೆಂಬ ಹಳೆಯದಾದ ಮತ್ತು ತರ್ಕವನ್ನು ಮೀರಿದ ಆರೋಪ. ಹೆಣ್ಣನ್ನೇ ಕೇಂದ್ರವಾಗಿರಿಸಿಕೊಂಡು ರೂಪುಗೊಳ್ಳುವ ನಿಯಮ–ಕಾಯಿದೆಗಳು, ಹೊಸ ಹೊಸ ಕಟ್ಟಳೆಗಳು. ಇದರೊಂದಿಗೆ ಗಂಡಿನ ಮನಸ್ಸಿನೊಳಗೆ ಇರಬಹುದಾದ ವಿಕೃತಿಯ ಕುರಿತು ಚರ್ಚೆಗಳು. ಈ ಜೋರು ಜೋರು ವಾಗ್ವಾದಗಳ ನಡುವೆ ಕೆಲವು ಸೂಕ್ಷ್ಮವಾದ ಮಾತುಗಳು ಕೇಳಿಸುತ್ತಿವೆ. ಅವು, ಮನಸ್ಸುಗಳನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಆಗಬೇಕಾದ ಬದಲಾವಣೆಗಳ ಕುರಿತ ಮಾತುಗಳು.

ಹೆಣ್ಣೇ ಆಗಿರಲಿ, ಗಂಡೇ ಆಗಿರಲಿ – ಶುಭ್ರಮನಸ್ಸಿನೊಂದಿಗೆ ಮಗು ಹುಟ್ಟುತ್ತದಷ್ಟೆ? ಈ ಮಗುವಿನ ಬೆಳ್ಳನೆಯ ಮನಸ್ಸಿನಲ್ಲಿ ಚಿತ್ರಗಳನ್ನು ಬರೆಯುವವರು ಯಾರು? ಲಾಲನೆ ಪಾಲನೆಯ ಜೊತೆ ಜೊತೆಗೆ ಅಪ್ಪ–ಅಮ್ಮ, ಬಂಧುಮಿತ್ರರು ಮಗುವಿನ ಮನಸ್ಸನ್ನು ಆರ್ದ್ರಗೊಳಿಸುವ ಇಲ್ಲವೇ ಪೆಡಸುಗೊಳಿಸುವ ಕೆಲಸವನ್ನು ಮಾಡುತ್ತಿರುತ್ತಾರೆ. ಸಮಾಜದಲ್ಲಿ ನಡೆಯುವ ಘಟನೆಗಳು, ಸಾಮಾಜಿಕ ನಿರ್ಧಾರಗಳು ಮತ್ತು ಈಗಾಗಲೇ ಚಾಲ್ತಿಯಲ್ಲಿರುವ ನಿಯಮಗಳು, ನಂಬಿಕೆಗಳು, ಇವೆಲ್ಲವೂ ಸೇರಿ ಮಗುವಿನ ಮನಸ್ಸಿನಲ್ಲಿ ಅಭಿಪ್ರಾಯಗಳನ್ನು ರೂಪಿಸುವ ಕೆಲಸ ನಡೆಯುತ್ತದೆ. ಮಗುವೊಂದು, ವ್ಯಕ್ತಿಯಾಗಿ ರೂಪುಗೊಳ್ಳುವ ದೀರ್ಘ ಅವಧಿಯಲ್ಲಿ ಸಾಕಷ್ಟು ಮಂದಿ ಅಭಿಪ್ರಾಯ ರೂಪಿಸುವ ಪಾತ್ರ ವಹಿಸಿರುತ್ತಾರೆ. ಈ ಎಲ್ಲವನ್ನೂ ಒಟ್ಟಾಗಿ ಸಾಮಾಜಿಕ ವ್ಯವಸ್ಥೆ ಎನ್ನಬಹುದು. ಈ ವ್ಯವಸ್ಥೆಯನ್ನು ನಾನು ಮರುಪರಿಶೀಲಿಸಬೇಕಾದ ಅಗತ್ಯದ ಬಗ್ಗೆ ಯೋಚಿಸಲು ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯದ ಪ್ರಕರಣಗಳು ಒತ್ತಾಯಿಸುತ್ತಿವೆ. ಸುಂದರವಾದ ಸಮಾಜವೊಂದರ ನಿರ್ಮಾಣಕ್ಕಾಗಿ, ಅಥವಾ ಮನುಷ್ಯರು ಮನುಷ್ಯರಾಗಿ ಜೀವಿಸಲು ಪೂರಕವಾದ ಸಮಾಜವೊಂದನ್ನು ನಿರ್ಮಿಸಬೇಕಾದರೆ, ವ್ಯಕ್ತಿತ್ವವನ್ನು ರೂಪುಗೊಳಿಸುವ ಪ್ರಕ್ರಿಯೆಯಲ್ಲಿ ನಾವು ತುರ್ತಾಗಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆಯೇ? ಎನ್ನುವುದು ಸದ್ಯಕ್ಕೆ ನಮ್ಮ ಮುಂದಿರುವ ಪ್ರಶ್ನೆ.

ಇತ್ತೀಚೆಗೆ ಭೇಟಿಯಾಗಿದ್ದ ಸಾಮಾಜಿಕ ಕಾರ್ಯಕರ್ತರೊಬ್ಬರ ಪುಟಾಣಿ ಮಗ ಚಟಪಟ ಅಂತ ಮಾತನಾಡುವ ಎರಡನೇ ತರಗತಿಯ ಪೋರ. ದೊಡ್ಡವರ ಕೀಟಲೆಯ ಪ್ರಶ್ನೆಗಳಿಗೆ ತುಂಟತನದ ಉತ್ತರಗಳನ್ನು ಕೊಡುವ ಮೂಲಕ ಎಲ್ಲರ ಗಮನಸೆಳೆಯುತ್ತಿದ್ದ ಆ ತುಂಟ, 'ತರಗತಿಯಲ್ಲಿ ನನ್ನ ಕ್ಲೋಸ್ ಫ್ರೆಂಡ್ ಮೂವರೂ ಹುಡುಗಿಯರು' ಎಂದು ಹೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು. ಅವನ ತಂದೆ, 'ಓಹೋ... ನಮಗೆಲ್ಲ ಹೀಗೆ ಗರ್ಲ್ ಫ್ರೆಂಡ್ ಎಂದು ಹೇಳಿಕೊಳ್ಳುವ ಅವಕಾಶವೇ ಇಲ್ಲ. ನಿನಗೆ ಅವಕಾಶ ಸಿಕ್ಕಿದೆ ನನ್ನ ಮಗನೇ... ಮಜಾ ಉಡಾಯಿಸು' ಎನ್ನುತ್ತ ಆ ಹುಡುಗನ ಅಪ್ಪ ದೊಡ್ಡದಾಗಿ ನಕ್ಕರು. ಉಳಿದವರೂ ನಕ್ಕರು. ಆದರೆ, 'ಮಜಾ ಉಡಾಯಿಸು' ಎನ್ನುವ ಮಾತಿನ ಹಿಂದೆ ಇರಬಹುದಾದ ಅರ್ಥಗಳು ಹೊಳೆದವೇನೋ, ಆ ಹುಡುಗನ ತಾಯಿ, 'ಶ್... ಏನ್ ಮಾತೂ ಅಂತ ಹೇಳ್ತೀರಿ ' ಎಂದು ಗಂಡನನ್ನು ದಬಾಯಿಸಿದರು. ಮಾತು ಬದಲಾಯಿತು.

ಸಾಮಾನ್ಯ ಘಟನೆಯಂತೆ ಭಾಸವಾಗುವ ಮೇಲಿನ ಸನ್ನಿವೇಶದಲ್ಲಿ ನಾವು ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯಗಳಿವೆ. ಅವುಗಳಲ್ಲಿ ಮೊದಲನೆಯದು – ಅಪ್ಪನಾದವನು ಹೆಚ್ಚು ನಿಗಾ ವಹಿಸದೆ ಆಡಿದ ಮಾತುಗಳು. ಎರಡನೆಯದು, ಗಂಡಾದರೆ ಹೇಗಾದರೂ ನೀನು ವರ್ತಿಸಬಹುದು ಎಂಬ ಕುರಿತು ಮಗನಿಗೆ ತನಗರಿವಿಲ್ಲದಂತೆಯೇ ಅಪ್ಪ ಸೂಚನೆ ನೀಡಿದಂತಿತ್ತು. ಆದರೆ ಅಮ್ಮನಿಗೆ ಆ ಸೂಕ್ಷ್ಮ ಅರ್ಥವಾಗಿ, ಆಕೆ ತನ್ನ ಆಕ್ಷೇಪವನ್ನು ತಕ್ಷಣ ದಾಖಲಿಸಿದ್ದಳು.

ಸಾಮಾನ್ಯವಾಗಿ ಆರು ಅಥವಾ ಏಳನೇ ತರಗತಿಯಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲೆಯಲ್ಲಿ



**ಗಣಿತ–ವಿಜ್ಞಾನದ ಅಂಕಗಳನ್ನು ಗಳಿಸಿ ಉನ್ನತ ಹುದ್ದೆಗಳನ್ನು ಸಂಪಾದಿಸುವ ವ್ಯಕ್ತಿಯ ಆದಾಯ ಚೆನ್ನಾಗಿರಬಹುದು. ಆದರೆ ಅವನ ಮನಸ್ಸು ಚೆನ್ನಾಗಿಲ್ಲದೇ ಇದ್ದರೆ, ಕೇವಲ ಹಣದಿಂದ ಏನು ಪ್ರಯೋಜನ?**

